ಪರಿಶೀಲಿಸಿ, ಸಾಧ್ಯಾಸಾಧ್ಯತೆ ವರದಿಯನ್ನು ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮರವರನ್ನು ಕೋರಲಾಗಿದೆ.

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು

184 (574); ಶ್ರೀ ಸಿ.ಎನ್.ಬಾಲಕೃಷ್ಣ

ಅ) ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳೇನು;

ಆ) ಕೃಷಿಕರಿಗೆ ಬೇಕಾಗುವ ನೀರಾವರಿ ಸೌಲಭ್ಯದ ಬೇಡಿಕೆ ಮತ್ತು ಪ್ರಸ್ತುತ ಇರುವ ನೀರಾವರಿ ಸೌಲಭ್ಯಗಳ ಪ್ರಮಾಣ ಕುರಿತಾದ ವಿವರಗಳೇನು;

ಇ) ಕೃಷಿ ಪ್ರಧಾನ ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ನೂತನ ಪ್ರಸ್ತಾವನೆಗಳ ವಿವರಗಳೇನು?

ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರ ಈ ಕೆಳಕಂಡಂತಿದೆ:

ಕ್ರ ಸಂ	ಯೋಜನೆ ಹೆಸರು	ಯೋಜಿತ ಅಚ್ಚುಕಟ್ಟು(ಹೆ)	ಸೃಷ್ಟಿಸಿರುವ ಅಚ್ಚುಕಟ್ಟು (ಹೆ)	ಆಗಿರುವ ವೆಚ್ಚ	ಪ್ರಸ್ತುತ ಹಂತ
1	ಹೇಮಾವತಿ	2,83,592	2,45,285	3315.63	ಹಾಸನ ಜಿಲ್ಲೆಯಲ್ಲಿ ಬರುವ ಕಾಮಗಾರಿಗಳು ಪೂರ್ಣಗೊಂಡಿವೆ

					ಇತರ ಜಿಲ್ಲೆಗಳಲ್ಲಿ ಬರುವ ಕಾಮಗಾರಿಗಳು ಪ್ರಗತಿಯಲ್ಲಿವೆ.
2	ಯಗಚಿ	17.274	11,897	443.88	ಕಾಮಗಾರಿ ಪ್ರಗತಿಯಲ್ಲಿದೆ

ಆ) ಕಾವೇರಿ ಕಣಿವೆಯಲ್ಲಿನ ಎಲ್ಲಾ ಯೋಜನೆಗಳು ಹಾಗೂ ಸಣ್ಣ ನೀರಾವರಿ ಕೆರೆಗಳ ಒಟ್ಟು ಸೌಲಭ್ಯದ ಬೇಡಿಕೆ 25.28 ಲಕ್ಷ ಎಕರೆ ಇದ್ದು, ಇದಕ್ಕೆ 381.73 ಟಿ.ಎಂ.ಸಿ ನೀರಿನ ಬೇಡಿಕೆಯಿರುತ್ತದೆ. ಅದರಂತೆ, ಕಾವೇರಿ ಜಲವಿವಾದದ ನ್ಯಾಯಾಧಿಕರಣದ ಮುಂದೆ ಬೇಡಿಕೆಯನ್ನು ಮಂಡಿಸಲಾಗಿತ್ತು. ಆದರೆ, ಕಾವೇರಿ ಜಲವಿವಾದದ ನ್ಯಾಯಮಂಡಳಿಯು ತನ್ನ ಅಂತಿಮ ತೀರ್ಪಿನಲ್ಲಿ ಇದನ್ನು 18.85ಲಕ್ಷ ಎಕರೆಗೆ 250.62 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಿರುತ್ತದೆ.

ಕಾವೇರಿ ಕಣಿವೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ನಿಗದಿಪಡಿಸಿರುವ 15.55 ಲಕ್ಷ ಎಕರೆಗಳಲ್ಲಿ ಇದುವರೆಗೆ 15.45 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ,

ಇ) ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ನೂತನ ಪ್ರಸ್ತಾವನೆ ಯಾವುದೂ ಇರುವುದಿಲ್ಲ.